೧೫

ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ನಾ.ನೃ.ಸಂ.ವಿ.ಪ್ರ.ಕಲಾ ಹಾಗೂ ಉತ್ಸವ: 16-17 ದಿನಾಂಕ:06/09/2016.

## ಸುತ್ತೋಲೆ

ವಿಷಯ:- 2016-17ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆ ಆಯೋಜಿಸುವ ಕುರಿತು.

ಉಲ್ಲೇಖ:- 1)Director VITM Ltr No VM 24(18) EDEXT/SISDF/2016 458 Dtd :01/06/2016.

2) ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ದಿನಾಂಕ:15/07/2016

******

2016-17 ನೇ ಸಾಲಿನಲ್ಲಿ ನಿರ್ದೇಶಕರು(ಪ್ರೌಢಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ವಸ್ತು ಸಂಗ್ರಹಾಲಯದ ಸಹಯೋಗದೊಂದಿಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ನಾಟಕ ಸ್ಪರ್ಧೆಯನ್ನು ಶಾಲಾ ಹಂತದಿಂದ ರಾಷ್ಟ್ರ ಹಂತದವರೆಗೆ ಆಯೋಜಿಸಲಾಗುತ್ತಿದೆ. 2016-17 ನೇ ಸಾಲಿನ ಕಾರ್ಯಕ್ರಮ ರಾಜ್ಯದ ಡಯಟ್‌ಗಳ ಮುಖಾಂತರ ಶಾಲಾ, ಬ್ಲಾಕ್ ಹಂತದಲ್ಲಿ ಪೂರ್ಣಗೊಂಡಿದ್ದು, ಜಿಲ್ಲಾ ಮಟ್ಟದಲ್ಲಿ ಬಹುತೇಕ ಪೂರ್ಣಗೊಂಡಿದೆ.

ಕಾರ್ಯಕ್ರಮದ ಮುಂದಿನ ಹಂತವಾಗಿ ವಿಭಾಗ ಮಟ್ಟದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ನಾಟಕ ಸ್ಪರ್ಧೆಯನ್ನು ವಿಭಾಗವಾರು ಸಿ.ಟಿ.ಇ/ ಡಯಟ್ ಪ್ರಾಂಶುಪಾಲರ ಉಸ್ತುವಾರಿಯಲ್ಲಿ ಅನುಬಂಧ -1 ರಲ್ಲಿರುವಂತೆ ಆಯೋಜಿಸಬೇಕಾಗಿದೆ.

ರಾಜ್ಯಹಂತದ ನಾಟಕ ಸ್ಪರ್ಧೆಯು ದಿನಾಂಕ: 28.10.2016 ರಂದು ಮತ್ತು ದಕ್ಷಿಣ ಭಾರತ ವಲಯ ಮಟ್ಟದ ನಾಟಕ ಸ್ಪರ್ಧೆಯು ನವಂಬರ್ 7 ಮತ್ತು 8, 2016 ರಂದು ನಿಗದಿಯಾಗಿರುವ ಕಾರಣ ನಿಮ್ಮ ವ್ಯಾಪ್ತಿಗೆ ಬರುವ ಶೈಕ್ಷಣಿಕ ಜಿಲ್ಲೆಗಳ ಪ್ರಥಮ ಸ್ಥಾನ ಪಡೆದ ತಂಡಗಳ ವಿವರಗಳನ್ನು ಪಡೆದು ಅಕ್ಟೋಬರ್,2016 ರ ಮೊದಲ ವಾರದೊಳಗೆ ಪೂರ್ಣಗೊಳ್ಳುವಂತೆ ವಿಭಾಗ ಮಟ್ಟದ ನಾಟಕ ಸ್ಪರ್ಧೆಯನ್ನು ಆಯೋಜಿಸಲು ಕ್ರಮ ಕೈಗೊಳ್ಳುವುದು.

**ಸದರಿ ಸ್ಪರ್ಧೆಯನ್ನು ನಿಗದಿತ ಕಾಲಮಿತಿಯಲ್ಲಿ ಕಡ್ಡಾಯವಾಗಿ ಪೂರ್ಣಗೊಳಿಸುವುದು.**

**ನಾಟಕ ಸ್ಪರ್ಧೆಯ ನಿಯಮಗಳು ಜಿಲ್ಲಾ ಹಂತದಲ್ಲಿದಂತೆಯೇ ಇರುತ್ತವೆ.**

- ಭಾಗವಹಿಸಲಿರುವವರು : 8 ರಿಂದ 10ನೇ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿ/ನಿಯರು. ಒಂದು ತಂಡದ ಸದಸ್ಯರ ಸಂಖ್ಯೆ: ಗರಿಷ್ಠ 08 ಜನ ವಿದ್ಯಾರ್ಥಿಗಳು ಮಾತ್ರ.
- ಶಿಕ್ಷಕರು ನಾಟಕ ಪ್ರದರ್ಶನವಾಗುತ್ತಿರುವ ಸಮಯದಲ್ಲಿ ನಾಟಕದ ರಂಗಸ್ಥಳದಲ್ಲಿ ಕಾಣಿಸಿಕೊಳ್ಳುವುದಾಗಲೀ , ಯಾವುದೇ ರೀತಿಯ ಸಹಕಾರಗಳನ್ನು ನೀಡುವುದಾಗಲೀ ಮಾಡುವಂತಿಲ್ಲ.
- ನಾಟಕದ ಅವಧಿ 30 ನಿಮಿಷಕ್ಕಿಂತ ಹೆಚ್ಚಿಗೆ ಇರಬಾರದು.
- ನಾಟಕ ನಿಗದಿಪಡಿಸಿರುವ ಮೈನ್ ಥೀಮ್ & ಸಬ್ ಥೀಮ್ ಹೊಂದಿದಂತೆ ವೈಜ್ಞಾನಿಕ ಸಂದೇಶವನ್ನು ಹೊಂದಿರಬೇಕು.
- ಸಮಯ ನಿರ್ವಹಣೆಯ ದೃಷ್ಟಿಯಿಂದ ನಾಟಕ ತಂಡಗಳು ಒಂದು ತಂಡದ ಪ್ರದರ್ಶನ ಪೂರ್ಣಗೊಂಡ ನಂತರ ಗರಿಷ್ಠ 10 ನಿಮಿಷಗಳ ಒಳಗಾಗಿ ನಾಟಕ ಪ್ರದರ್ಶನಕ್ಕೆ ಸಿದ್ಧವಾಗುವಂತಿರಬೇಕು.

- ನಾಟಕವನ್ನು ಆಸಕ್ತಿದಾಯಕವಾಗಿಸಲು ವೇಷಭೂಷಣಗಳನ್ನು, ನೃತ್ಯ, ಸಂಗೀತ, ವೈಜ್ಞಾನಿಕ ಮಾದರಿ, ವೈಜ್ಞಾನಿಕ ಉಪಕರಣಗಳು ಪೋಸ್ಟರ್, ಬ್ಯಾನರ್, ಧೃಕ್ ಶ್ರವಣ ಮಾಧ್ಯಮ, ಮೈಮ್ ಇತ್ಯಾದಿಗಳನ್ನು ಬಳಸಬಹುದು.
- ನಾಟಕದ ಪ್ರಸ್ತುತಿಯಲ್ಲಿ ಬಳಸಬಹುದಾದ ಭಾಷೆ : ಮಾನ್ಯತೆ ಪಡೆದ ಯಾವುದೇ ಭಾರತೀಯ ಭಾಷೆ
- ನಾಟಕ ಪ್ರದರ್ಶನದ ಮೊದಲು ನಾಟಕದ Script ನ 4 ಪ್ರತಿಗಳನ್ನು ಸಲ್ಲಿಸುವುದು.

<u>ನಾಟಕದ ವಿಷಯ ಮತ್ತು ಅಂಕಗಳ ವಿವರ ಈ ಕೆಳಕಂಡಂತಿದೆ.</u>

| ❖ **Main Theme : Science and Society: ವಿಜ್ಞಾನ ಮತ್ತು ಸಮಾಜ** | | |
|---|---|---|
| Sub Themes: | 1 Clean India: Healthy India | 1. ಸ್ವಚ್ಛ ಭಾರತ: ಆರೋಗ್ಯಕರ ಭಾರತ |
| | 2.Food Security And Nutrition | 2. ಆಹಾರ ಸುರಕ್ಷತೆ ಮತ್ತು ಪೌಷ್ಠಿಕತೆ |
| | 3.Digital India: Power To Empower | 3. ಡಿಜಿಟಲ್ ಭಾರತ: ಸಬಲೀಕರಣಕ್ಕಾಗಿ ಬಲ |
| | 4.Make In India | 4. ಮೇಕ್ ಇನ್ ಇಂಡಿಯಾ |
| | 5.Green Energy | 5. ಹಸಿರು ಶಕ್ತಿ |
| | 6. Life And Works Of A Scientist | 6. ವಿಜ್ಞಾನಿಯ ಜೀವನ ಮತ್ತು ಸಾಧನೆಗಳು |

<u>ಸ್ಪರ್ಧೆಯಲ್ಲಿ ಈ ಕೆಳಗಿನಂತೆ ಅಂಕಗಳ ವಿತರಣೆ ಇರುತ್ತದೆ. ಒಟ್ಟು 100 ಅಂಕಗಳಿಗೆ</u>

ನಾಟಕದಲ್ಲಿನ ವೈಜ್ಞಾನಿಕ ವಿಷಯ. (Scientific content in the drama) = 30 ಅಂಕಗಳು

ನಾಟಕದ ಪ್ರಸ್ತುತಿ. (Presentation of the drama) =50 ಅಂಕಗಳು

ನಾಟಕದ ಪರಿಣಾಮ . (Effectiveness of the drama) =20 ಅಂಕಗಳು

ವಿಭಾಗ ಮಟ್ಟದ ನಾಟಕ ಸ್ಪರ್ಧೆ ಆಯೋಜನೆಗೆ ಪ್ರತಿ ಆಯೋಜಕ ಸಿ.ಟಿ.ಇ/ ಡಯಟ್‌ಗೆ ರೂ.40,000=00 ಈಗಾಗಲೇ ಅಪ್‌ಲೋಡ್ ಮಾಡಿದೆ. ಅನುದಾನವನ್ನು ಎ.ಸಿ ಬಿಲ್‌ನಲ್ಲಿ ಡ್ರಾ ಮಾಡಲು ಅನುಮತಿಸಿದೆ.

**ರಾಜ್ಯ ಮಟ್ಟದ ನಾಟಕ ಸ್ಪರ್ಧೆಯು ದಿನಾಂಕ** :08.102016 ರಂದು ಉಡುಪಿ ಜಿಲ್ಲೆಯಲ್ಲಿ.
**ಆಯೋಜಕರು:** ಪ್ರಾಂಶುಪಾಲರು, ಡಯಟ್, ಉಡುಪಿ

**ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ತಂಡದ ವಿವರಗಳನ್ನು** <u>secdirector.edu.sgkar@nic.in</u> <u>sis.dsert-ka@nic.in</u> **ಡಯಟ್ ಉಡುಪಿಗೆ** <u>**diet.udupi@gmail.com**</u> **ಗೆ ಇ-ಮೇಲ್ ಮೂಲಕ ಮಾಹಿತಿ ನೀಡುವುದು.**

<u>ವೃತ್ತಿಪರ ರಂಗಭೂಮಿಯಲ್ಲಿ ತೊಡಗಿರುವ ಸಂಪನ್ಮೂಲ ವ್ಯಕ್ತಿಗಳನ್ನು/ ನಟರನ್ನು, ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಾಟಕ ವಿಷಯದ ಶಿಕ್ಷಕರನ್ನು ತೀರ್ಪುಗಾರರಾಗಿ ತೆಗೆದುಕೊಳ್ಳುವುದು</u>

**ಕಾರ್ಯಕ್ರಮ ಪೂರ್ಣಗೊಂಡ 3 ದಿನಗಳ ಒಳಗಾಗಿ ಈ ಕೆಳಕಂಡ ಮಾಹಿತಿಗಳನ್ನು ನಿರ್ದೇಶಕರು, ಪ್ರೌಢಶಿಕ್ಷಣ,ಆಯುಕ್ತರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ <u>ಸಲ್ಲಿಸುವುದು.</u>**

1. ಕಾರ್ಯಕ್ರಮದ ಫೋಟೋ ಸಹಿತ ಪೂರ್ಣ ವರದಿ.

| 2016-17 ರ ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯ ಆಯೋಜಕರು ಮತ್ತು ಭಾಗವಹಿಸುವ ಜಿಲ್ಲೆಗಳ ವಿವರ | | |
|---|---|---|
| ಕ್ರ ಸಂ | ಆಯೋಜಕರು | ಭಾಗವಹಿಸುವ ಜಿಲ್ಲೆಗಳು |
| 1 | ಪ್ರಾಂಶುಪಾಲರು ಸಿ.ಟಿ.ಇ.ಗುಲ್ಬರ್ಗ 9449242519 | 1.ಬೀದರ್, 2) ಗುಲ್ಬರ್ಗ, 3)ಯಾದಗಿರಿ, 4)ಬಾಗಲಕೋಟೆ , 5)ರಾಯಚೂರು, 6)ಬಿಜಾಪುರ. |
| 2 | ಪ್ರಾಂಶುಪಾಲರು ಡಯಟ್ ಧಾರವಾಡ | 1)ಚಿಕ್ಕೋಡಿ, 2)ಕಾರವಾರ, 3)ಧಾರವಾಡ )ಗದಗ 5) ಶಿರಸಿ, 6) ಬೆಳಗಾವಿ. |
| 3 | ಪ್ರಾಂಶುಪಾಲರು ಸಿ.ಟಿ.ಇ. ಚಿತ್ರದುರ್ಗ 9448337434 | 1)ಚಿತ್ರದುರ್ಗ, 2) ಹಾವೇರಿ, 3) ದಾವಣಗೆರೆ 4)ಮಧುಗಿರಿ , 5) ಬಳ್ಳಾರಿ 6)ಕೊಪ್ಪಳ. |
| 4 | ಪ್ರಾಂಶುಪಾಲರು ಡಯಟ್ ಬೆಂಗಳೂರು ಗ್ರಾಮಾಂತರ | 1)ಬೆಂಗಳೂರು ಉತ್ತರ , 2) ಬೆಂಗಳೂರು ದಕ್ಷಿಣ, 3) ಕೋಲಾರ 4) ಬೆಂಗಳೂರು ಗ್ರಾಮಾಂತರ , 5)ಚಿಕ್ಕಬಳ್ಳಾಪುರ 6) ತುಮಕೂರು. |
| 5 | ಪ್ರಾಂಶುಪಾಲರು ಡಯಟ್ ಶಿವಮೊಗ್ಗ | 1)ಚಿಕ್ಕಮಗಳೂರು, 2) ಉಡುಪಿ, 3)ದಕ್ಷಿಣ ಕನ್ನಡ 4)ಶಿವಮೊಗ್ಗ , 5) ಹಾಸನ. |
| 6 | ಪ್ರಾಂಶುಪಾಲರು ಸಿ.ಟಿ.ಇ. ಮೈಸೂರು | 1)ಮೈಸೂರು, 2) ಕೊಡಗು, 3)ಚಾಮರಾಜನಗರ, 4)ಮಂಡ್ಯ , 5) ರಾಮನಗರ. |

8277417707

2. ತೀರ್ಪುಗಾರರ ವಿವರಗಳು

| ತೀರ್ಪುಗಾರರ ಹೆಸರು | ಹುದ್ದೆ ಮತ್ತು ವಿಳಾಸ | ದೂರವಾಣಿ |
|---|---|---|
| | | |
| | | |
| | | |

3. ರಾಜ್ಯಮಟ್ಟಕ್ಕೆ ಆಯ್ಕೆಯಾದ ತಂಡದ ವಿವರ.

| ವಿಭಾಗೀಯ ಮಟ್ಟದ ಆಯೋಜಕರು | ಪ್ರಥಮ ಸ್ಥಾನ ಪಡೆದ ಶಾಲೆಯ ಹೆಸರು ಮತ್ತು ಸಂಪೂರ್ಣ ವಿಳಾಸ | ಮಾರ್ಗದರ್ಶಿ ಶಿಕ್ಷಕರ ಹೆಸರು, ಹುದ್ದೆ ಮತ್ತು ದೂರವಾಣಿ ಸಂಖ್ಯೆ | ಪ್ರಥಮ ಸ್ಥಾನ ಪಡೆದ ತಂಡದ ಸದಸ್ಯರ ಹೆಸರು- ತಂಡದ ಎಲ್ಲಾ ಸದಸ್ಯರ ಹೆಸರು |
|---|---|---|---|
| | | | |

**ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯ ಆಯೋಜನೆಗಾಗಿ ಕೆಳಕಂಡಂತೆ ವೆಚ್ಚ ಭರಿಸಬಹುದಾಗಿದೆ**

| ಕ್ರ.ಸ. | ವಿವರ | ಮೊತ್ತ |
|---|---|---|
| 1 | ಬಹುಮಾನ<br>ಪ್ರಥಮ - 2800/-<br>ದ್ವಿತೀಯ - 2400/-<br>ತೃತೀಯ - 2000/-<br>ಉತ್ತಮ ನಿರ್ದೇಶಕ, ಉತ್ತಮ ನಾಟಕ ರಚನಕಾರರು, ಉತ್ತಮ ನಟ, ಉತ್ತಮ ನಟಿ, ತಲಾ ಒಂದರಂತೆ 4 ಬಹುಮಾನಗಳು ರೂ. 300/- ರಂತೆ<br>ಒಟ್ಟು | <br>2800-00<br>2400-00<br>2000-00<br><br>1200-00<br><br>**ರೂ. 8400-00** |
| 2 | ತೀರ್ಪುಗಾರರ ಸಂಭಾವನೆ (3 X 1000) | ರೂ. 3000-00 |
| 3 | ಉಳಿಕೆ ಮೊತ್ತದಲ್ಲಿ ಈ ಕೆಳಕಂಡ ವೆಚ್ಚಗಳನ್ನು ಭರಿಸಬಹುದಾಗಿದೆ.<br>• ಸ್ಪರ್ಧಿಗಳು & ಮಾರ್ಗದರ್ಶಿ ಶಿಕ್ಷಕರು, ತೀರ್ಪುಗಾರರ ಮತ್ತು ಆಯೋಜಕರ ಉಪಾಹಾರ, ಊಟ, ಕಾಫಿ, ವೆಚ್ಚ ಭರಿಸಲು<br>• ಪ್ರತಿ ತಂಡದ 8 ಸ್ಪರ್ಧಿಗಳು ಮತ್ತು ಮಾರ್ಗದರ್ಶಿ ಶಿಕ್ಷಕರಿಗೆ ಸಾಮಾನ್ಯ ಬಸ್ ಪ್ರಯಾಣ ದರ/ ಸಾಮಾನ್ಯ ರೈಲು ಪ್ರಯಾಣ ದರವನ್ನು ಪಾವತಿಸಲು<br>• ಸಾದಿಲ್ವಾರು, ದಾಖಲೀಕರಣ ಹಾಗೂ ಆಯೋಜನಾ ವೆಚ್ಚ ಭರಿಸಲು | ರೂ.28,600=00 |
| | ಒಟ್ಟು | ರೂ.40,000=00 |

CTE. Gulbarga@gmail.com

ನಿರ್ದೇಶಕರು(ಪ್ರೌಢಶಿಕ್ಷಣ)

ಗೆ,

**ಪ್ರಾಂಶುಪಾಲರು ಸಿ.ಟಿ.ಇ ಮೈಸೂರು,/ಕಲಬುರಗಿ/ಚಿತ್ರದುರ್ಗ/ಡಯಟ್-ಧಾರವಾಡ/ ಶಿವಮೊಗ್ಗ/ಬೆಂಗಳೂರು ಗ್ರಾಮಾಂತರ ರವರ ಅಗತ್ಯ ಕ್ರಮಕ್ಕೆ**

**ಪ್ರತಿಯನ್ನು:-**

1) 34 ಡಯಟ್ ಪ್ರಾಂಶುಪಾಲರುಗಳು & 34 ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ.
2) ಕಛೇರಿ ಪ್ರತಿ.
3) ಸಂಯೋಜಕರು, ವಿ.ಐ.ಟಿ.ಎಂ. ಅಂಚೆ ಪೆಟ್ಟಿಗೆ ಸಂಖ್ಯೆ: 5216, ಕಸ್ತೂರಬಾ ರಸ್ತೆ, ಬೆಂಗಳೂರು-560001 ಇವರಿಗೆ ಮಾಹಿತಿಗಾಗಿ.